ಕಲೆಗೂ ಏನಯ್ಯಾ ಸಂಬಂಧ, ಗೋಕುಲಾಷ್ಟಮಿಗೂ ಇಮಾಂಸಾಬಿಗೂ ಇದ್ದ ಹಾಗೆ!' ಎಂದು ನನ್ನ ಗೆಳೆಯರೊಬ್ಬರು ಹೇಳಿದರು. ಅವರು ಕಲಾವಿದರು, ಸಾಹಿತಿ. ಅವರೇ ಏಕೆ? ನೂರಕ್ಕೆ ತೊಂಬತ್ತೊಂಬತ್ತು ಜನ ಹಾಗೆಯೆ ತಿಳಿದಿದ್ದಾರೆ.

ಗಾಂಧೀಜಿಗೆ ಈ ವಾದದಲ್ಲಿ ಹುರುಳು ಕಾಣುವುದಿಲ್ಲ. ಗುರಿಯನ್ನು ಬಿಟ್ಟು ಸುತ್ತಾಡುವುದು ವೃಥಾ ಕಾಲಹರಣ. ಅವರು ದರಿದ್ರನಾರಾಯಣನ ಭಕ್ತರು. 'ಏನೇ ಮಾಡಲಿ, ಏನೇ ಆಡಲಿ, ನಾನು ನಮ್ಮ ಮೂವತ್ತುಮೂರು ಕೋಟಿ ಜನರನ್ನು ಮರೆಯಲಾರೆ. ಹಗಲಿರುಳು ಅವರ ಚಿಂತೆಯೇ ಚಿಂತೆ ನನಗೆ. ಚೆಲುವನ್ನು ನೋಡಿ ಆ ಚೆಲುವಿನ ನಡುವೆ ಸತ್ಯವನ್ನು ಕಾಣುವ ಹಾಗೆ ನನ್ನ ಜನಕೋಟಿಗೆ ನಾವು ಕಲಿಸಬಲ್ಲೆವೆ? ಆ ರೀತಿ ಶಿಕ್ಷಣ ಕೊಡುವುದು ಸಾಧ್ಯವೆ? ಅವರಿಗೆ ಮೊದಲು ಸತ್ಯ ತೋರಿಸುವ. ಅವರೇ ಅದರಲ್ಲಿ ಚೆಲುವನ್ನು ಆಮೇಲೆ ನೋಡಿಯಾರು. ಕನಸಿನಲ್ಲೂ ಎಚ್ಚರದಲ್ಲೂ ನನಗೆ ಉತ್ಕಲದ ಚಿತ್ರ ಕಣ್ಣಿಗೆ ಕಟ್ಟಿ ಕಾಣುತ್ತಿದೆ. ಆ ಹತಭಾಗ್ಯ ಜೀವಚ್ಛವಗಳಿಗೆ ಯಾವುದರಿಂದಲಾದರೂ ಲಾಭವಾಗುವುದಾದರೆ ಅದೇ ನನ್ನ ಪಾಲಿಗೆ ಚೆಲುವು. ಮೊದಲು ಹೊಟ್ಟೆಗೆ ಹಿಡಿ ಹಿಟ್ಟು, ಆಮೇಲೆ ಉಳಿದುದು. ಸದ್ಯ ಬದುಕಲಿಕ್ಕೆ ಅತ್ಯಗತ್ಯವಾದುದನ್ನು ಮೊದಲು ಕೊಡೋಣ. ಅನಂತರ ಅಂದಚೆಂದಗಳೆಲ್ಲ ತಾವೇ ಬಂದಾವು? ಅವರ ಜೀವನರಾಗದ ಶ್ರುತಿ ತಿಳಿಯದೆ ಅವರ ರಸಜೀವನ ತಿಳಿಯುವುದಿಲ್ಲ.



'ನಿಮ್ಮ ಬಾಳಿನ ರೀತಿಯಲ್ಲಿ ಕಲೆ ಕಾಣುವುದಿಲ್ಲ. ಕಲೆಗೆ ಬಹಿಷ್ಕಾರ ಹಾಕಿದಿರೇನು ನೀವು?' ಎಂದು ಒಬ್ಬರು ಆಪ್ತವರ್ಗದವರು, ಗಾಂಧೀಜಿಯನ್ನು ಕೇಳಿಯೇ ಬಿಟ್ಟರು ಒಂದು ಸಲ.

ಗಾಂಧೀಜಿ ಹೇಳಿದರು: 'ಈ ವಿಷಯದಲ್ಲಿ ಜನ ನನ್ನ ಬಗ್ಗೆ ಬಹಳ ತಪ್ಪು ತಿಳಿದುಕೊಂಡಿದ್ದಾರೆ. ಎಲ್ಲ ವಸ್ತುಗಳಿಗೂ ಎರಡು ಅಂಗಗಳಿವೆ– ಅಂತರಂಗ, ಬಹಿರಂಗ, ಇವೆರಡರಲ್ಲಿ ನಾವು ಯಾವುದರ ಮೇಲೆ ಕಾಲೂರಿ ನಿಲ್ಲುತ್ತೇವೆಂಬುದೇ ಮುಖ್ಯ. ನಮಗೆ ಯಾವುದರಲ್ಲಿ ಅಭಿರುಚಿಯೆಂಬುದು ಪ್ರಶ್ನೆ. ಅಂತರಂಗವಿಕಾಸಕ್ಕೆ ನೆರವಾಗದಿದ್ದರೆ ಬಹಿರಂಗವು ವ್ಯರ್ಥ. ಅದಕ್ಕೆ ಬೆಲೆಯಿಲ್ಲ. ಸತ್ಯವಾದ ಕಲೆ ಅಂತರಂಗದಿಂದ ಒಡಮೂಡಿಬಂದುದು; ಆ ವಿಕಾಸದ ಆವಿರ್ಭಾವ. ಒಳಗಿರುವ ಬೆಳಕನ್ನು ಎಷ್ಟೆಷ್ಟು ದೂರ ಹೊರಗೆ ಹರಿಯಿಸಬಲ್ಲೆವೋ ಅಷ್ಟಷ್ಟು ಬೆಲೆ ಹೊರಗಿನ ರೂಪಕ್ಕೆ. ಮಾನವನ ಅಂತರಂಗದ ಪ್ರತಿಬಿಂಬವಾದಷ್ಟು ಪ್ರಮಾಣದಲ್ಲೇ ಬಹಿರಂಗಕ್ಕೆ ಬೆಲೆ. ಆ ತರದ ಕಲೆ ನನಗೆ ತುಂಬಾ ಇಷ್ಟ. ಆದರೆ ಈಗೇನು, ಎಲ್ಲರೂ ಕಲಾವಿದರೇ! ಅವರ ಕಲೆಯಲ್ಲಿ ಮಾತ್ರ ಆತ್ಮೋನ್ನತಿಯ ಪ್ರಯತ್ನವೂ ಇಲ್ಲ, ಆತ್ಮವಿಕಾಸದ ಗುರುತೂ ಇಲ್ಲ.

'ಜೀವಿಗೆ ತನ್ನ ಅಂತರಾತ್ಮದರ್ಶನ ಮಾಡಿಸಿಕೊಡಲು ನೆರವಾಗದ ಕಲೆ ಕಲೆಯಲ್ಲ. ನನ್ನ